ಪಕ್ಕದ ಜಮೀನುದಾರರಿಗೆ ಮೊದಲೇ ಅವರಿಗೆ ಎನ್.ಒ.ಸಿ. ಕೊಡತಕ್ಕಂಥ ಸಂದರ್ಭದಲ್ಲಿಯೇ ಅಕ್ಕಪಕ್ಕದವರು ಅಬ್ಜೆಕ್ಷನ್ ಹಾಕುವುದಕ್ಕೆ ಕಾನೂನಿನ ಪ್ರಕಾರ ಅವಕಾಶವಿದೆ. ಸಾರ್ವಜನಿಕವಾಗಿ ಎನ್.ಓ.ಸಿ. ಕೊಡುವ ಒಂದು ತಿಂಗಳ ಮುಂಚೆಯೇ ಅಬ್ಜೆಕ್ಷನ್ ಹಾಕಲು ಅವಕಾಶ ಕೊಟ್ಟು 30 ದಿನಗಳ ಕಾಲಾವಕಾಶವನ್ನು ಕೊಟ್ಟಿರುತ್ತಾರೆ. ಅದನ್ನು ಅನೌನ್ಸ್ ಮಾಡಿದ ಮೂವತ್ತು ದಿನದ ನಂತರವೇ ಅವರಿಗೆ ಎನ್.ಓ.ಸಿ. ಕೊಡತಕ್ಕಂಥದ್ದು.

ಶ್ರೀ ಕಟ್ಟಾಸುಬ್ರಮಣ್ಯ ನಾಯ್ಡು : ಪಕ್ಕದಲ್ಲಿರುವವರು ಅಬ್ಜೆಕ್ಷನ್ ಮಾಡಿದರೂ ಕೂಡ ಅವರು ಅಬ್ಜೆಕ್ಷನ್ ಅರ್ಜಿ ಹಾಕಿದ್ದರೂ ಕೂಡ ತಾವು ಲೈಸೆನ್ಸ್‌ನ್ನು ಮತ್ತೆ ಕೊಟ್ಟು ಇವೊತ್ತು ಬೆಂಗಳೂರು ಸುತ್ತಮುತ್ತ ಕ್ವಾರಿಗಳು ನಡೆಯುತ್ತಿವೆ. ಅದಕ್ಕೆ ಹತ್ತು ಉದಾಹರಣೆಗಳನ್ನು ನಾನೇ ಕೊಡಬಲ್ಲಿ. ಅದಕ್ಕೆ ಕಾರಣವೇನು?

ಶ್ರೀ ವಿ. ಮುನಿಯಪ್ಪ : ಮಾನ್ಯ ಅಧ್ಯಕ್ಷರೆ, ನಾನು ಬಹಳ ಕ್ಲಿಯರ್ ಆಗಿ ಹೇಳಿದ್ದೇನೆ. ಮಾನ್ಯ ಜಿಲ್ಲಾಧಿಕಾರಿಗಳು, ಸಂಬಂಧಪಟ್ಟವರು ಎನ್.ಓ.ಸಿ. ಕೊಡದೇ ನಾವು ಗಣಿಗಾರಿಕೆಗೆ ಲೈಸೆನ್ಸ್ ಕೊಡುವುದಕ್ಕೆ ಸಾಧ್ಯವೇ ಇಲ್ಲ. ಆ ರೀತಿ ಕೊಟ್ಟರೂ ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ ಎಂದು ದೂರುಗಳು ಬಂದರೆ ಖಂಡಿತ ಕ್ಯಾನ್ಸಲ್ ಮಾಡುತ್ತೇವೆ. ಈಗ ಬನ್ನೇರುಘಟ್ಟದ ಹತ್ತಿರ ದೂರುಗಳು ಬಂದಿತ್ತು. ಅಲ್ಲೆಲ್ಲಾ ನಮ್ಮ ಇಲಾಖೆಯವರು ಹೋಗಿ ನೋಡಿ ಅನೇಕ ಲೈಸೆನ್ಸ್‌ಗಳನ್ನು ಕ್ಯಾನ್ಸಲ್ ಮಾಡಿದ್ದಾರೆ.

ಶ್ರೀ ಕಟ್ಟಾಸುಬ್ರಮಣ್ಯ ನಾಯ್ಡು : ಬನ್ನೇರುಘಟ್ಟದ ಬಗ್ಗೆಯೇ ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಪಕ್ಕದಲ್ಲಿರುವವರೆಲ್ಲರೂ, ಸಾರ್ವಜನಿಕರು ಬಂದು ಅರ್ಜಿ ಕೊಟ್ಟರೂ, ಕಂಪ್ಲೆಂಟ್ ಮಾಡಿದ್ದರೂ ಕೂಡ ಇಲ್ಲಿಯತನಕ ಆ ಕ್ವಾರಿಯನ್ನು ಮುಚ್ಚಲಿಲ್ಲ. ಆ ಕ್ವಾರಿ ಹಾಗೆಯೇ ನಡೆಯುತ್ತಿದೆ. ಅದರ ಬಗ್ಗೆ ತಾವು ಯಾವ ಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ವಿ. ಮುನಿಯಪ್ಪ : ಅದರ ಬಗ್ಗೆ ಪರಿಶೀಲನೆ ಮಾಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಅಕ್ರಮವಾದ ಗಣಿಗಾರಿಕೆ ಕರಡಿಗುಡ್ಡದಲ್ಲಿ ಮತ್ತು ಚಾಮರಾಜನಗರದಲ್ಲಿ ನಡೆಯುತ್ತಿತ್ತು. ಹೈಕೋರ್ಟ್‌ನಿಂದ ಆಜ್ಞೆಯಾದ ಮೇಲೆ ಅದನ್ನು ಸಂಪೂರ್ಣವಾಗಿ ಬಂದ್ ಮಾಡಿದ್ದೇವೆ ಎನ್ನತಕ್ಕಂಥ ಮಾತನ್ನು ಸಚಿವರು ಹೇಳಿದರು. ನಾನು ಈಗ ಇಲ್ಲಿ ಕೇಳುವಂಥದ್ದು ಏನೆಂದರೆ, ಅಕ್ರಮವಾಗಿ ಅಲ್ಲಿ ಗಣಿಗಾರಿಕೆಯನ್ನು ಯಾರು ಮಾಡುತ್ತಿದ್ದರೋ ಅವರ ಹೆಸರುಗಳನ್ನು ಸದನದಲ್ಲಿ ಹೇಳಿದ್ದರೆ ಒಳ್ಳೆಯದಿತ್ತು. ಇದಲ್ಲದೇ ಕೆಲವೊಂದು ಮೆಟೀರಿಯಲ್‌ಗಳನ್ನೂ ನೀವು ಸೀಜ್ ಮಾಡಿದ್ದೀರಿ. ಅವು ಯಾರದ್ದು, ಎಂಥದ್ದು ಎಂದು ಸ್ವಲ್ಪ ಡಿಸ್‌ಕ್ಲೋಸ್ ಮಾಡಿದರೆ ಒಳ್ಳೆಯದಾಗುತ್ತದೆ. ಏಕೆಂದರೆ ಎಚ್ಚರಿಕೆ ಕೊಟ್ಟಂತಾಗುತ್ತದೆ. ದಯವಿಟ್ಟು ಅಕ್ರಮವಾಗಿ ಗಣಿಗಾರಿಕೆ ಯಾರು ಮಾಡುತ್ತಿದ್ದರು ಎಂದು ಹೆಸರನ್ನು ಹೇಳಿ.

ಶ್ರೀ ವಿ. ಮುನಿಯಪ್ಪ : ಮಾನ್ಯ ಅಧ್ಯಕ್ಷರೆ, ನಾನು ಅದನ್ನು ತರಿಸಿ ಕೊಡುತ್ತೇನೆ. ಹೆಸರು ಮತ್ತು ಆ ವಿವರಗಳನ್ನೆಲ್ಲಾ ತರಿಸಿಕೊಡುತ್ತೇನೆ.

ಧಾರವಾಡ ಜಿಲ್ಲೆಯ ಪಶು ಸಂಗೋಪನಾ ಇಲಾಖೆಯಲ್ಲಿ ಖಾಲಿ ಹುದ್ದೆಗಳ ಭರ್ತಿ

612 (5167) : ಶ್ರೀ ಚಿಕ್ಕನಗೌಡರ ಸಿದ್ದನಗೌಡ ಈಶ್ವರ ಗೌಡ (ಕಲ್ಘಟಗಿ) ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಧಾರವಾಡ ಜಿಲ್ಲೆಯ ಪಶುಸಂಗೋಪನಾ ಇಲಾಖೆಯಲ್ಲಿ ಪ್ರಸ್ತುತ ಖಾಲಿ ಇರುವ ಹುದ್ದೆಗಳೆಷ್ಟು; ಅವು ಯಾವುವು; (ತಾಲ್ಲೂಕುವಾರು ವಿವರ ನೀಡುವುದು)

ಆ) ಸಹಾಯಕ ನಿರ್ದೇಶಕರ ಹುದ್ದೆ, ಪಶುವೈದ್ಯಾಧಿಕಾರಿ ಹಾಗೂ ಪಶು ಸಹಾಯಕರ ಹುದ್ದೆಗಳು ಸಹ ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇದುವರೆಗೆ ಖಾಲಿ ಇರಲು ಕಾರಣಗಳೇನು;

ಇ) ಬಂದಿದ್ದಲ್ಲಿ, ಇವುಗಳ ಭರ್ತಿಗೆ ಸರ್ಕಾರ ಯಾವ ಕ್ರಮಕ್ಕೈಗೊಳ್ಳುವುದು.

ಈ) ಇದರಿಂದಾಗಿ ಆ ಭಾಗದ ರೈತರ ಜಾನುವಾರುಗಳಿಗೆ ಅನಾನುಕೂಲವಾಗುವುದೆಂದು ಸರ್ಕಾರ ಭಾವಿಸುವುದಿಲ್ಲವೇ?

ಶ್ರೀ ಎಂ. ಮಹಾದೇವ್ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು)

ಅ) ಒಟ್ಟು 62 ಹುದ್ದೆಗಳು ಖಾಲಿ ಇವೆ (ತಾಲ್ಲೂಕುವಾರು ವಿವರ ಅನುಬಂಧದಲ್ಲಿ ನೀಡಲಾಗಿದೆ)

ಆ) ಕೆಲವೊಂದು ಹುದ್ದೆಗಳು ಆರ್ಥಿಕ ಮಿತವ್ಯಯದ ಕಾರಣದಿಂದ ಖಾಲಿ ಇರುತ್ತವೆ.

ಇ) 250 ಪಶುವೈದ್ಯಾಧಿಕಾರಿಗಳ ಹುದ್ದೆಗಳನ್ನು ನೇಮಕ ಮಾಡಿಕೊಳ್ಳುವ ಪ್ರಕ್ರಿಯೆ ಪ್ರಗತಿಯಲ್ಲಿದೆ.

ಖಾಲಿ ಇರುವ 'ಡಿ' ದರ್ಜೆ ಹುದ್ದೆಗಳನ್ನು ಅನುಕಂಪದ ಆಧಾರದ ಮೇಲೆ ಮತ್ತು ಬೇರೆ ಇಲಾಖೆಗಳಿಂದ ಮರುವಿನ್ಯಾಸದ ಮೂಲಕ ಭರ್ತಿ ಮಾಡಲಾಗುತ್ತಿದೆ.

ಈ) ಸಿಬ್ಬಂದಿ ಖಾಲಿ ಇರುವ ಸಂಸ್ಥೆಗಳ ಕಾರ್ಯಗಳನ್ನು ಹತ್ತಿರದಲ್ಲಿರುವ ನೆರೆ ಸಂಸ್ಥೆಗಳಿಂದ ಪ್ರಭಾರ ವ್ಯವಸ್ಥೆ ಮೂಲಕ ರೈತರ ಜಾನುವಾರುಗಳ ಚಿಕಿತ್ಸೆಗೆ ಕ್ರಮ ಕೈಗೊಳ್ಳಲಾಗುತ್ತಿದೆ.

ಅನುಬಂಧ

ಹುದ್ದೆಯ ಹೆಸರು	ಧಾರವಾಡ			ಹುಬ್ಬಳ್ಳಿ			ಕಲ್ಲುಟಗಿ			ಕುಂದಗೋಳ			ನವಲಗುಂದ			ಒಟ್ಟು		
	ಮಂಜೂರು	ಭರ್ತಿ	ಖಾಲಿ	ಮಂಜೂರು	ಭರ್ತಿ	ಖಾಲಿ	ಮಂಜೂರು	ಭರ್ತಿ	ಖಾಲಿ	ಮಂಜೂರು	ಭರ್ತಿ	ಖಾಲಿ	ಮಂಜೂರು	ಭರ್ತಿ	ಖಾಲಿ	ಮಂಜೂರು	ಭರ್ತಿ	ಖಾಲಿ
1	2	3	4	5	6	7	8	9	10	11	12	13	14	15	16	17	18	19
ಉಪ ನಿರ್ದೇಶಕರು	1	1	0	0	0	0	0	0	0	0	0	0	0	0	0	1	1	0
ಸಹಾಯಕ ನಿರ್ದೇಶಕರು	5	4	1	2	1	1	1	0	1	1	1	0	1	0	1	10	6	4
ಪಶುವೈದ್ಯಾಧಿಕಾರಿಗಳು	10	6	4	11	8	3	7	0	7	8	4	4	8	3	5	44	21	23
ಆಡಳಿತ ಸಹಾಯಕರು	1	1	0	0	0	0	0	0	0	0	0	0	0	0	0	1	1	0
ಪ.ವೈ. ಮೇಲ್ವಿಚಾರಕರು	2	1	1	1	1	0	0	0	0	1	0	1	1	1	0	5	3	2
ಹಿ ಪ ವೈ ಪರೀಕ್ಷಕರು	17	17	0	9	9	0	5	2	3	4	4	0	8	7	1	43	39	4
ಪವೈ ಪರೀಕ್ಷಕರು	12	12	0	13	13	0	10	10	0	12	12	0	8	8	0	55	55	0
ಪವೈ ಸಹಾಯಕರು	14	13	1	8	7	1	4	1	3	5	4	1	8	7	1	39	32	7
ಪ್ರ.ದ.ಸ 6	6	0	1	1	0	0	0	0	0	0	0	0	0	0	0	7	7	0
ಶೀಘ್ರಲಿಪಿಗಾರರು	1	1	0	0	0	0	0	0	0		0	0	0	0	0	1	1	0
ಹಿ ಬೆರಳಚ್ಚುಗಾರರು	1	0	1	0	0	0	0	0		0	0	0	0	0	0	1	0	1
ಬೆರಳಚ್ಚುಗಾರರು	0	0	0	1	1	0	0	0	0	0	0		0	0	0	1	1	0
ದ್ವಿ.ದ.ಸ. 3	2	1	1	1	0	0	0	0	0	0	0	0	0	0	0	4	3	1
ವಾಹನ ಚಾಲಕರು	3	1	2	1	1	0	2	2	0	1	1	0	0	0	0	7	5	2
ಎಕ್ಸ್‌ರೇ ಟೆಕ್ನೀಷಿಯನ್	0	0	0	1	0	1	0	0	0	0	0	0	0	0	0	1	0	1
ಎಕ್ಸ್‌ರೇ ಸಹಾಯಕ	0	0	0	1	0	1	0	0	–	–	–	–	–	0	–	1	–	1
ಜವಾದಾರ	1	1	–	–	–	–	–	–	–	–	–	–	–	–	–	1	1	–
ಡಿ ದರ್ಜೆ	49	47	2	34	30	4	24	18	6	28	26	2	25	23	2	160	144	16
ಒಟ್ಟು	126	113	13	84	73	11	53	33	20	60	52	8	59	49	10	382	326	62

ಶ್ರೀ ಚಿಕ್ಕನಗೌಡರ ಸಿದ್ದನಗೌಡ ಈಶ್ವರಗೌಡ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಆದರೆ ನಾನು ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಧಾರವಾಡ ಜಿಲ್ಲೆಯಲ್ಲಿ ಒಟ್ಟು ಎಷ್ಟು ಹುದ್ದೆಗಳು ಖಾಲಿ ಇವೆ ಎಂದು ತಿಳಿಸಿದ್ದೀರಿ. ಒಟ್ಟು 62 ಹುದ್ದೆಗಳು ಖಾಲಿ ಇವೆ ಎಂದು ವಿವರಗಳನ್ನು ಕೊಟ್ಟಿದ್ದಿರಿ. ಇನ್ನು ಎರಡನೆಯ ಪ್ರಶ್ನೆಯಲ್ಲಿ ಧಾರವಾಡ ಜಿಲ್ಲೆಯಲ್ಲಿ, ಕಲಘಟಗಿ ತಾಲ್ಲೂಕಿನಲ್ಲಿ, ಯಾವ ಯಾವ ತಾಲ್ಲೂಕಿನಲ್ಲಿ ಎಷ್ಟು ಹುದ್ದೆಗಳು ಖಾಲಿ ಇವೆ ಎನ್ನುವ ಬಗ್ಗೆ ಮಾಹಿತಿ ಕೊಡಿ ಎಂದು ಕೇಳಿರುವುದಕ್ಕೆ ಅವರು ಮಾಹಿತಿ ಕೊಟ್ಟಿದ್ದಾರೆ. ಒಟ್ಟಾರೆ 62 ಹುದ್ದೆಗಳು ಖಾಲಿ ಇವೆ ಎನ್ನುವಂಥ ಮಾಹಿತಿಯನ್ನು ಅವರು ಕೊಟ್ಟಿದ್ದಾರೆ. ಆದರೆ ನಾನು ಸಚಿವರಲ್ಲಿ ವಿನಂತಿಸಿಕೊಳ್ಳುತ್ತೇನೆ. ತಾವು ಧಾರವಾಡ ಜಿಲ್ಲೆಗೆ ಸೇರಿದ ಐದು ತಾಲ್ಲೂಕುಗಳಲ್ಲಿ ನನ್ನ ಕ್ಷೇತ್ರ ಕಲಘಟಗಿ ಕ್ಷೇತ್ರಕ್ಕೆ, ಧಾರವಾಡಕ್ಕೆ ನೋಡಿದರೆ 10 ಸೀಟ್ ಖಾಲಿ ಇದೆ. ನವಲಗುಂದಕ್ಕೆ 10 ಖಾಲಿ ಇದೆ. ಧಾರವಾಡ ಗ್ರಾಮೀಣ 13, ಹುಬ್ಬಳ್ಳಿ 11 ಕಲಘಟಗಿ 20 ಎಂದು ಹೇಳಿದ್ದಾರೆ. ಆದರೆ ನನ್ನ ಕ್ಷೇತ್ರ ಕಲಘಟಗಿ ಮಲೆನಾಡು ಪ್ರದೇಶ ಅಭಿವೃದ್ಧಿ ಏರಿಯಾದಲ್ಲಿ ಬರತಕ್ಕಂತಹ ಕ್ಷೇತ್ರ 20 ಹುದ್ದೆಗಳು ಖಾಲಿ ಇವೆ ಎಂದು ಮಾಹಿತಿ ಕೊಟ್ಟಿದ್ದಾರೆ. ಮೂರನೇ ಪ್ರಶ್ನೆ ಸರ್ಕಾರ ಯಾವ ಕ್ರಮ ತೆಗೆದುಕೊಳ್ಳುತ್ತದೆ ಎಂದು ಕೇಳಿದಾಗ 2250 ಪಶುವೈದ್ಯಾಧಿಕಾರಿಗಳನ್ನು ಭರ್ತಿ ಮಾಡಿಕೊಳ್ಳುತ್ತೇವೆಂದು ಹೇಳಿದ್ದಾರೆ. ಆದರೆ ತಮ್ಮ ಮುಖಾಂತರ ಅವರಿಗೆ ವಿನಂತಿ ಮಾಡುತ್ತೇನೆ. ಏಕೆಂದರೆ, ಕಲಘಟಗಿ ತಾಲ್ಲೂಕಿನಲ್ಲಿ ಏಳೆಂಟು ಸಾರಿ ತಮಗೆ ಮನವಿ ಕೊಟ್ಟಿದ್ದೇನೆ. ಆದರೆ ಯಾವುದೇ ಒಬ್ಬ ಪಶುವೈದ್ಯಾಧಿಕಾರಿಯನ್ನು ಅಲ್ಲಿ ಭರ್ತಿ ಮಾಡಿಲ್ಲ. ತಾವು ಯಾವಾಗ ಭರ್ತಿ ಮಾಡುತ್ತೀರಿ ಎಂದು ಹೇಳಬೇಕೆಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಮಹದೇವ್ : ಸನ್ಮಾನ್ಯ ಅಧ್ಯಕ್ಷರೆ, ಧಾರವಾಡ ಜಿಲ್ಲೆಯಲ್ಲಿ ಐದು ತಾಲ್ಲೂಕುಗಳು ಇವೆ. ಸುಮಾರು 104 ಪಶುವೈದ್ಯ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ. 382 ಮಂಜೂರಾದ ಹುದ್ದೆಗಳು ಇವೆ. ಅವುಗಳ ಪೈಕಿ 320 ಹುದ್ದೆಗಳು ಭರ್ತಿ ಆಗಿವೆ. ಸುಮಾರು 62 ಹುದ್ದೆಗಳು ಖಾಲಿ ಇವೆ. ಶೇಕಡ 84ರಷ್ಟು ಹುದ್ದೆಗಳನ್ನು ಅಲ್ಲಿ ಭರ್ತಿ ಮಾಡಿದ್ದೇವೆ. ಅಲ್ಲಿ ಆಕಸ್ಮಿಕವಾಗಿ ಖಾಲಿ ಇದ್ದ ಕಡೆ ಆಸ್ಪತ್ರೆಗಳಲ್ಲಿ ಪಕ್ಕದ ಆಸ್ಪತ್ರೆಗಳಲ್ಲಿ ನೋಡಲಿಕ್ಕೆ ಅವರಿಗೆ ಅಸಿಸ್ಟೆಂಟ್ ಡೈರೆಕ್ಟರ್ ಆಗಲಿ, ಇನ್‌ಸ್ಪೆಕ್ಟರ್‌ರಾಗಲಿ ಯಾರನ್ನಾದರೂ ನೇಮಿಸುತ್ತೇವೆ. ಅದರಿಂದ ನಿಮ್ಮ ತಾಲ್ಲೂಕಿನಲ್ಲಿ ತೊಂದರೆಯಾಗಿಲ್ಲ ಎಂದು ನನ್ನ ಭಾವನೆ. ತಾವು ಯಾವಾಗ 550 ಹುದ್ದೆಗಳನ್ನು ಭರ್ತಿ ಮಾಡುತ್ತೀರಿ ಎಂದು ಕೇಳಿದ್ದೀರಿ, 557 ಪಶುವೈದ್ಯ ಹುದ್ದೆಗಳನ್ನು ತುಂಬಲು ಸರ್ಕಾರ ಒಪ್ಪಿಗೆ ಕೊಟ್ಟಿದೆ. ಈಗಾಗಲೇ 250 ಹುದ್ದೆಗಳನ್ನು ತಕ್ಷಣವೇ ಭರ್ತಿ ಮಾಡಲು ಹಣಕಾಸು ಇಲಾಖೆ ಒಪ್ಪಿಗೆ ಕೊಟ್ಟಿದೆ. ಸದ್ಯದಲ್ಲಿಯೇ ನೋಟಿಫಿಕೇಷನ್ ಮಾಡಿ ಭರ್ತಿ ಮಾಡುತ್ತೇವೆ. ಆ ಸಂದರ್ಭದಲ್ಲಿ ನಿಮ್ಮ ಕೊರತೆಯನ್ನು ನಾವು ಭರ್ತಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಚಿಕ್ಕನಗೌಡ ಸಿದ್ದನಗೌಡ ಈಶ್ವರಗೌಡ : ಮಾನ್ಯ ಸಚಿವರು ತಾವು ಏನು ಮಾಹಿತಿ ಕೊಟ್ಟಿದ್ದೀರಿ, ಸಹಾಯಕ ನಿರ್ದೇಶಕರ ಹುದ್ದೆ ನಮ್ಮ ತಾಲ್ಲೂಕಿನಲ್ಲಿ ಒಂದು ಇದೆ ಎಂದು ನನಗೆ ತಿಳಿದ ಮಾಹಿತಿ. ಆದರೆ ನಾನು ನಿಮಗೆ ಒತ್ತಾಯ ಮಾಡುತ್ತೇನೆ. ಯಾವುದೇ ಜಿಲ್ಲೆಯಲ್ಲಿರುವಂತಹ, ಯಾವುದೇ ತಾಲ್ಲೂಕಿನಲ್ಲಿ ಇದ್ದ ಒಂದು ಪಶು ಆಸ್ಪತ್ರೆಯ ಒಂದು ಬಿಲ್ಡಿಂಗ್ ಕಟ್ಟಿದ್ದು ನೋಡಿದರೆ ನನಗೆ ಬಹಳ ಸಂತೋಷವಾಗುತ್ತದೆ. ಪಶುಸಂಗೋಪನಾ ಇಲಾಖೆಯವರು ಕಟ್ಟಿದ ಬಿಲ್ಡಿಂಗ್

ಏನಿದೆ, ಇವತ್ತು ಅಲ್ಲಿ ದನಕರುಗಳು ಹೋಗಿ ನಿಲ್ಲುತ್ತವೆ. ಇಸ್ಪೀಟ್ ಆಡುವವರು ಹೋಗಿ ಕೂತಿರುತ್ತಾರೆ. ಇಂತಹ ಸನ್ನಿವೇಶ ಇವತ್ತು ಕಲಘಟಗಿ ತಾಲ್ಲೂಕಿನಲ್ಲಿ ಕಾಣುತ್ತಿದ್ದೇವೆ. ಈಗಾಗಲೇ ತಾವು ಕಲಘಟಗಿ ತಾಲ್ಲೂಕಿನಲ್ಲಿ 53 ಹುದ್ದೆಗಳು ಖಾಲಿ ಇವೆ ಎಂದು ತಾವು ಕೊಟ್ಟಿದ್ದೀರಿ, ಯಾವ ಯಾವ ಹುದ್ದೆಗಳು ಖಾಲಿ ಇವೆ, ಎಂದರೆ ಸಹಾಯಕ ನಿರ್ದೇಶಕರ ಹುದ್ದೆ ಅಲ್ಲಿ ಖಾಲಿ ಇದೆ ಎಂದು ತಾವು ವಿವರ ಕೊಟ್ಟಿದ್ದೀರಿ. ಪಶುವೈದ್ಯಾಧಿಕಾರಿಗಳ ಏಳು ಹುದ್ದೆಗಳು ಖಾಲಿ ಇವೆ ಎಂದು ಕೊಟ್ಟಿದ್ದೀರಿ. ತಾವು ಕೊಟ್ಟ ಉತ್ತರದಲ್ಲಿ ಡಿ ದರ್ಜೆಯ 24 ಹುದ್ದೆಯಲ್ಲಿ 18 ಹುದ್ದೆ ಖಾಲಿ ಇದೆ ಎಂದು ಕೊಟ್ಟಿದ್ದೀರಿ. ಈ ಡಿ ದರ್ಜೆ ನೌಕರರು ಅಲ್ಲಿ ಏನು ಮಾಡುತ್ತಾರೆ. ಎಂದು ಸಚಿವರು ಮನವರಿಕೆ ಮಾಡಿಕೊಡಬೇಕು.

ಶ್ರೀ ಎಂ. ಮಹಾದೇವ್ : ನೌಕರರು ನಿಯಮಾನುಸಾರ ಕೆಲಸಮಾಡುತ್ತಾರೆ. 'ಡಿ' ದರ್ಜೆ ನೌಕರರು ಅವರ ಜವಾಬ್ದಾರಿ ಏನಿದೆ ಅದರ ಪ್ರಕಾರ ಕೆಲಸ ಮಾಡುತ್ತಾರೆ. ಆಸ್ಪತ್ರೆ ಮಂಜೂರಾತಿ ಆಗದೆ ಇರುವ ಕಡೆ ಕಟ್ಟಡಗಳನ್ನು ಕಟ್ಟಿದರೆ ಅದನ್ನು ನಾವೂ ಏನೂ ಮಾಡುವುದಕ್ಕಾಗುವುದಿಲ್ಲ. ಆದರೆ ಹೊಸ ಪಶುವೈದ್ಯಾಲಯ ಮಂಜೂರಾತಿ ಆದ ಮೇಲೆ ಅದು ಉಪಯೋಗಕ್ಕೆ ಬರುತ್ತದೆ. ಸರ್ಕಾರದ ಅನುಮತಿ ಇಲ್ಲದೆ ಇವರು ಕಟ್ಟಡ ಕಟ್ಟಿ ಖಾಲಿ ಇವೆ, ಸರಿಯಾಗಿ ಕೆಲಸ ಮಾಡುತ್ತಿಲ್ಲ ಎಂದರೆ ಅದಕ್ಕೆ ಏನೂ ಮಾಡುವುದಕ್ಕಾಗುವುದಿಲ್ಲ. ಆಗ ಸರ್ಕಾರ ಮಂಜೂರಾತಿ ಮಾಡಿದ ಮೇಲೆ ಕಟ್ಟಡ ಕಟ್ಟಿದರೆ ಪರವಾಗಿಲ್ಲ. ಮಾನ್ಯ ಸದಸ್ಯರು ಕಳವಳ ಪಡಬೇಕಾದುದು ಇಲ್ಲ. ಎಲ್ಲಿ ಭರ್ತಿ ಆಗಿಲ್ಲ. ಎಲ್ಲಿ ಅವಶ್ಯಕತೆ ಇದೆ ಅಂತಹ ಕಡೆ ನೇಮಕ ಮಾಡುವ ಸಮಯದಲ್ಲಿ ಮಾಡಿಕೊಡುತ್ತೇವೆ.

ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ : ಎಲ್ಲಿ ಅವಶ್ಯಕತೆ ಇದೆ ಅಲ್ಲಿ ಕಟ್ಟಡಗಳು ಇಲ್ಲ. ಎಲ್ಲಿ ಪಶುವೈದ್ಯಕೀಯ ದವಾಖಾನೆಗಳು ಮಂಜೂರಾತಿ ಆಗಿವೆ ಅಲ್ಲಿ ಕಟ್ಟಡಗಳು ಇಲ್ಲ. ಕಟ್ಟಡ ಆದರೂ ಕಟ್ಟಿಸಿ. ಧಾರವಾಡ ನಗರದಲ್ಲಿ ಎರಡು ಕಡೆ ಕಟ್ಟಡ ಇಲ್ಲ. ಕಟ್ಟಡ ಕಟ್ಟಿಸಿ ಎಂದು ಮೇಲಿಂದ ಮೇಲೆ ಕೇಳುತ್ತಿದ್ದೇವೆ. ಪಶುವೈದ್ಯಕೀಯ ದವಾಖಾನೆ ಇವೆ ಕಟ್ಟಡ ಇಲ್ಲ.

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಮಾನ್ಯ ಮಹದೇವ್‌ರವರು ಆಸ್ಪತ್ರೆಗಳನ್ನು ಹೆಚ್ಚಿಗೆ ತೆಗೆದಿದ್ದಾರೆ ಬಹಳ ಸಂತೋಷ. ಆದರೆ ಜಿಲ್ಲಾ ಪಂಚಾಯಿತಿಯವರು ಒಂದು ವರ್ಷಕ್ಕೆ ಎರಡು ವೆಟರ್ನರಿ ಆಸ್ಪತ್ರೆ ಕಟ್ಟಡಗಳಿಗೆ ದುಡ್ಡು ಇರುತ್ತದೆ. ಅಲ್ಲಿ ಹೊಸ ಕಟ್ಟಡ ನಿರ್ಮಾಣ ಆಗ ಬೇಕಾದರೆ 25 ವರ್ಷಗಳು ಬೇಕು. ಅದಕ್ಕೆ ಹುಡ್ಕೋದಿಂದ ಸಾಲ ತೆಗೆದುಕೊಂಡು ಮಾನ್ಯ ಮಂತ್ರಿಗಳು ಏನು ಮೇಲ್ದರ್ಜೆಗೇರಿಸಿ ಅಲ್ಲಿ ವೈದ್ಯ ಪರೀಕ್ಷಕರಿಗೆ ಮತ್ತು ಔಷಧಗಳನ್ನು ಮತ್ತು ಕಟ್ಟಡಗಳನ್ನು ಕೊಡುವ ವ್ಯವಸ್ಥೆ ಮಾಡಲಿ ಎಂದು ನಿಮ್ಮ ಮುಖಾಂತರ ಪಶುಸಂಗೋಪನಾ ಸಚಿವರಿಗೆ ಕೇಳುತ್ತೇನೆ.

(ಈ ಹಂತದಲ್ಲಿ ಉಪಾಧ್ಯಕ್ಷರು ಶ್ರೀ ಮನೋಹರ್ ಹೆಚ್. ತಹಸೀಲ್ದಾರ್‌ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಉಪಾಧ್ಯಕ್ಷರು : ಹಿಂದೆ ಜಿಲ್ಲಾಪರಿಷತ್ತಿನಿಂದ ಮಂಜೂರು ಮಾಡಿ ಕಟ್ಟಡವನ್ನು ಕಟ್ಟಿದರು. ಆ ನಂತರ ಸರ್ಕಾರದ ಮಂಜೂರಾತಿ ಬೇಕೆಂದು ಇದ್ದಂತಹ ಸಾಮಾನುಗಳೂ ಕೂಡ ಎತ್ತಿಕೊಂಡು ಹೋದರು. ಇದು ನಮ್ಮ ಕ್ಷೇತ್ರಗಳಲ್ಲಿ ಆಗಿದೆ. ಅಂತಹ ಸ್ಥಳಗಳಲ್ಲಿ ಆದರೂ ಮಂಜೂರು ಮಾಡಿ ಕೊಡಿ.

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಜಿಲ್ಲಾ ಪಂಚಾಯಿತಿಯಲ್ಲಿ ಒಂದು ವರ್ಷಕ್ಕೆ ಎರಡು ಕಟ್ಟಡಗಳಿಗೆ ಹಣ ಇಟ್ಟಿರುತ್ತಾರೆ ಅದು ಪರಿಪೂರ್ಣ ಆಗಿರುವುದಿಲ್ಲ.

ಶ್ರೀ ಎಂ. ಮಹದೇವ್ : ಸರ್ಕಾರದ ಮಂಜೂರಾತಿ ಪಡೆದು ಕಟ್ಟಡವನ್ನು ಕಟ್ಟಿದರೆ ಅಲ್ಲಿ ಸಿಬ್ಬಂದಿ ಇತರೇ ವ್ಯವಸ್ಥೆಗಳನ್ನು ಮಾಡುತ್ತೇವೆ. ಪಶು ಆಸ್ಪತ್ರೆ ಮಂಜೂರಾತಿ ಪಡೆಯದೆ ಕಟ್ಟಡ ಕಟ್ಟಿಕೊಂಡರೆ ಅದನ್ನು ಭರ್ತಿ ಆಗುವವರೆಗೆ ಕಟ್ಟಡ ಹಾಗೆಯೇ ಇರುತ್ತದೆ. ಭರ್ತಿ ಆಗುವುದಕ್ಕೆ ಮಂಜೂರಾತಿ ಕೊಟ್ಟಮೇಲೆ ಅದಕ್ಕೆ ಏನು ವ್ಯವಸ್ಥೆ ಮಾಡಬೇಕು ಅದನ್ನು ಮಾಡುತ್ತೇನೆ. ಮಂಜೂರಾತಿ ಆದ ಕಟ್ಟಡ ಇದ್ದು, ಅಲ್ಲಿ ಸಿಬ್ಬಂದಿ ಕೊರತೆ ಇದೆ ಎಂದು ನಮ್ಮ ಗಮನಕ್ಕೆ ತಂದರೆ ಅದರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಇವರು ಮೇಲ್ದರ್ಜೆಗೆ ಏರಿಸಿದರು, ಹಿಂದೆ ನಮ್ಮ ಸರ್ಕಾರ ಇದ್ದಾಗ ಆಸ್ಪತೆಗಳನ್ನು ಮಂಜೂರಾತಿ ಮಾಡಿದೆ. ಅದರ ಹಿರಿದೆಯೂ ಮಂಜೂರು ಮಾಡಿದೆ. ಬೇರೆ ಬೇರೆ ಕಡೆ ನಡೆಯುತ್ತದೆ. ಯಾವುದೇ ಸರ್ಕಾರಿ ಕಟ್ಟಡಗಳಲ್ಲಿ ನಡೆಯುತ್ತಿಲ್ಲ. ಒಂದು ಜಿಲ್ಲಾ ಪಂಚಾಯಿತಿಯಲ್ಲಿ ಒಂದು ವರ್ಷಕ್ಕೆ ಮೂರರಿಂದ ನಾಲ್ಕು ಕಟ್ಟಡಕ್ಕೆ ಅರ್ಧ ದುಡ್ಡು ಇಟ್ಟಿರುತ್ತಾರೆ. ಜಿಲ್ಲಾ ಪಂಚಾಯಿತಿ ಸದಸ್ಯರು ನಾಲ್ಕು ಇದ್ದುದ್ದು ಎಂಟು ಮಾಡಿ ಮೂರು ವರ್ಷಗಳಿಗೆ ನಾಲ್ಕು ವರ್ಷಗಳಿಗೆ ಮುಗಿಸುತ್ತಾರೆ. ಕಟ್ಟಡ ಇರುವುದಿಲ್ಲ. ಔಷಧಿ ಇರುವುದಿಲ್ಲ. ವೈದ್ಯರು ಇರುವುದಿಲ್ಲ. ಆದಷ್ಟು ಬೇಗ ಕಟ್ಟಡ ನಿರ್ಮಾಣ ಮಾಡಲಿಕ್ಕೆ ಮಂತ್ರಿಗಳು ಹುಡ್ಕೋದಿಂದ ಸಾಲ ತೆಗೆದುಕೊಂಡು, ಜಿಲಲ್ಲಾ ಪಂಚಾಯಿತಿ ಕೊಡುವ ಅನುದಾನದಿಂದ 40 ವರ್ಷಗಳಾದರೂ ಅವರು ಏನು ಮಂಜೂರು ಮಾಡಿದ್ದಾರೆ ಆಸ್ಪತ್ರೆಗಳನ್ನು ಕಟ್ಟುವುದಕ್ಕೆ ಸಾಧ್ಯವಾಗುವುದಿಲ್ಲ. ನಬಾರ್ಡ್‌ನಿಂದ ಹುಡ್ಕೋದಿಂದ ಸಾಲ ತೆಗೆದುಕೊಂಡು ಮಾನ್ಯ ಮಂತ್ರಿಗಳು ಪರಿಪೂರ್ಣ ಕಟ್ಟಡವನ್ನು ಕೊಡುವುದರ ಮುಖಾಂತರ ಅಲ್ಲಿ ವೈದ್ಯರು ಎಲ್ಲಿದ್ದಾರೆಂದು ವಿಚಾರ ಮಾಡಬೇಕಾಗುತ್ತದೆ. ಯಾವುದೋ ದೇವಸ್ಥಾನದಲ್ಲಿ, ಒಂದು ಭಾಗದಲ್ಲಿ ನಡೆಯುತ್ತಿವೆ.

ಶ್ರೀ ಎಂ. ಮಹಾದೇವ್ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಕೃಷ್ಣಮೂರ್ತಿಯವರು ಹೇಳಿದಂತಹ ಸಲಹೆ ನಮ್ಮ ಮುಂದೆ ಇಲ್ಲ. ಅದರ ಬಗ್ಗೆ ವಿಚಾರ ಮಾಡುತ್ತೇವೆ.

ಶ್ರೀ ಚಿಕ್ಕನಗೌಡ ಸಿದ್ದನಗೌಡ ಈಶ್ವರಗೌಡ : ಧಾರವಾಡ ಜಿಲ್ಲೆಯಲ್ಲಿ ಈಗ ಏನು 26 ಹುದ್ದೆಗಳು ಕಡಿಮೆ ಇವೆ ಎಂದು ಕೊಟ್ಟಿದ್ದೀರಿ, ಒಬ್ಬ ಡಾಕ್ಟರ್ ಬಿಟ್ಟರೆ 10 ಮಂದಿ ಡಾಕ್ಟರ್ ನಾನು ಕೇಳಿದ್ದೇನೆ. ಧಾರವಾಡ ಜಿಲ್ಲೆಯಲ್ಲಿ ತಾವು ಏಕೆ ನೌಕರಿ ಮಾಡುವುದಕ್ಕೆ ಬರುವುದಿಲ್ಲ ಎಂದು ಕೇಳಿದಾಗ ಅವರು ಎನು ಹೇಳುತ್ತಾರೆಂದರೆ ಬರೀ ನಾಲ್ಕು ಲಕ್ಷ ರೂಪಾಯಿ ನಮ್ಮ ಪಗಾರಕ್ಕೆ ಕೊಟ್ಟಿದ್ದಾರೆ. ನಾಲ್ಕು ತಿಂಗಳಿನಿಂದ ನಮಗೆ ಸರ್ಕಾರದಿಂದ ಬರುವಂತಹ ಪಗಾರ ಬಂದಿಲ್ಲ. ನಾವು ಧಾರವಾಡ ಜಿಲ್ಲೆಯಲ್ಲಿ ಈ ಪಶು ಆರೋಗ್ಯ ಇಲಾಖೆಯಲ್ಲಿ ಏಕೆ ಇರುವುದಿಲ್ಲ ಎಂಬುದರ ಬಗ್ಗೆ ವಿಚಾರಗಳನ್ನು ಹೇಳುತ್ತಿದ್ದಾರೆ. ನಾನು ಮೊನ್ನೆ ಜಿಲ್ಲಾ ಪಂಚಾಯಿತಿಯ ಮೀಟಿಂಗ್ ಕರೆದಾಗ ನಮ್ಮ ಮಾನ್ಯ ಬೆಲ್ಲದ್‌ರವರು ಹಿರಿಯರು ಇದ್ದರು. 54 ಲಕ್ಷ ರೂಪಾಯಿ ಅವರು ಬೇಕೆಂದು ತಮಗೆ ಶಿಫಾರಸ್ಸು ಮಾಡಿ ಕಳುಹಿಸಿ ಆರು ತಿಂಗಳುಗಳಾದವು, ಆರು ತಿಂಗಳಲ್ಲಿ ಬರೀ ನಾಲ್ಕು ಲಕ್ಷ ರೂಪಾಯಿ ಮಾತ್ರ ಬಿಡುಗಡೆ ಮಾಡಿದ್ದೀರಿ ಅವರಿಗೆ ನಾಲ್ಕು ಲಕ್ಷ ರೂಪಾಯಿಯಲ್ಲಿ ನಾಲ್ಕು ತಿಂಗಳ ಪಗಾರ ಆಗಿಲ್ಲ ಪಶುಸಂಗೋಪನಾ ಇಲಾಖೆಯಲ್ಲಿ ನಮಗೆ ದುಡಿಯುವುದಕ್ಕೆ ಆಗುವುದಿಲ್ಲ ಎಂದು ಹೇಳುತ್ತಿದ್ದಾರೆ. ಅದಕ್ಕೆ ತಾವು ಏನು ಉತ್ತರ ಹೇಳುತ್ತೀರ ಹೇಳಿ?

ಶ್ರೀ ಎಂ. ಮಹಾದೇವ್ : ಮಾನ್ಯ ಉಪಾಧ್ಯಕ್ಷರೆ, ಯಾವ ಅಧಿಕಾರಿಗಳಿಂದ ಆ ರೀತಿ ಆರೋಪ ಬಂದಿದೆ ಎಂದು ಹೆಸರು ಹೇಳಿ, ಅದನ್ನು ಕ್ಲಾರಿಫೈ ಮಾಡಿ ನಾನು ಆಕ್ಷನ್

ತೆಗೆದುಕೊಳ್ಳುತ್ತೇನೆ. ಜಿಲ್ಲಾಪರಿಷತ್ತಿನ ಯಾವ ಅಧಿಕಾರಿ ಆ ರೀತಿ ನಮಗೆ ಕೆಲಸ ಮಾಡುವುದಕ್ಕಾಗುವುದಿಲ್ಲ. ಹಣ ಇಲ್ಲವೆಂದು ತಮ್ಮಲ್ಲಿ ಕೊರತೆ ಹೇಳಿಕೊಂಡಿದ್ದಾರೆ, ಆ ಅಧಿಕಾರಿ ಹೆಸರು ಹೇಳಿದರೆ ನಾನು ವಿಚಾರ ತಿಳಿದುಕೊಂಡು ಅವರ ಮೇಲೆ ಅಗತ್ಯ ಕ್ರಮ ತೆಗೆದುಕೊಳ್ಳುತ್ತೇನೆ.

ಉಪಾಧ್ಯಕ್ಷರು : ನಿಮ್ಮ ಇಲಾಖೆಯ ಅಧಿಕಾರಿಗಳೇ ಹೇಳುತ್ತಾರೆ. ಇನ್ನು ಯಾರು ಹೇಳುತ್ತಾರೆ?

ಶ್ರೀ ಚಿಕ್ಕನಗೌಡ ಸಿದ್ದನಗೌಡ ಈಶ್ವರಗೌಡ : ಹುಬ್ಬಳ್ಳಿ ತಾಲ್ಲೂಕು ಕಲಘಟಗಿ ತಾಲೂಕು ಕೂಡಿ ನನ್ನ ಕ್ಷೇತ್ರ ಬರುತ್ತದೆ. ನಮಗೆ ಮಗ್ಗುಲಲ್ಲಿ ದವಾಖಾನೆಯಿಲ್ಲ.

ಉಪಾಧ್ಯಕ್ಷರು : ನಿಮ್ಮ ಭಾಷೆ ಕೂಡ ಮಂತ್ರಿಗಳಿಗೆ ಅರ್ಥವಾಗುವುದಿಲ್ಲ. ನೀವು ಕೇಳುವುದನ್ನು ಕೇಳುವುದಿಲ್ಲ. ಏನೋ ಕೇಳುತ್ತೀರಿ, ಅವರು ಉತ್ತರ ಹೇಳುವುದಿಲ್ಲ.

ಶ್ರೀ ಎಂ. ಮಹದೇವ್ : ಅವರಿಗೇನು ಕಷ್ಟವಿದೆ ಎನ್ನುವುದನ್ನು ನೇರವಾಗಿ ಹೇಳಿದರೆ ಸಹಾಯ ಮಾಡುವುದಕ್ಕೆ ಅನುಕೂಲವಾಗುತ್ತದೆ. ಅವರು ನೇರವಾಗಿ ಹೇಳಿಬಿಡಲಿ ಇಂಥ ಕಷ್ಟ, ಸಮಸ್ಯೆ ನಮಗಿದೆ ಅದಕ್ಕೆ ಸರ್ಕಾರ ಏನು ಮಾಡಬೇಕು ಎಂಬುದನ್ನು ಹೇಳಿಬಿಡಲಿ.

ಶ್ರೀ ಚಿಕ್ಕನಗೌಡರ ಸಿದ್ದನಗೌಡ ಈಶ್ವರಗೌಡ : ತಾವು ವಿಚಾರ ಮಾಡಬೇಕು ನಮ್ಮ ಕಡೆ ಐದು ಪಶು ವೈದ್ಯಕೀಯ ಆಸ್ಪತ್ರೆ ಇದ್ದರೂ ಕೂಡ ಒಬ್ಬ ವೈದ್ಯರೂ ಇಲ್ಲ. ಅಲ್ಲಿ ಬರೆ ಕಾಂಪೌಂಡರ್ ಇದ್ದಾರೆ. ಆ ಕಾಂಪೌಂಡರ್ ಕಟ್ಟಿಕೊಂಡು ನಾವೇನು ಮಾಡುವುದು? ಅಲ್ಲಿ ಔಷಧಗಳನ್ನು ಕೊಡುವವರು ಅವರೇ ಆಗಿದ್ದಾರೆ. ತಾವು ಇದರ ಬಗ್ಗೆ ಹೇಳಬೇಕು.

ಶ್ರೀ ಎಂ. ಮಹದೇವ್ : ಮಾನ್ಯ ಉಪಾಧ್ಯಕ್ಷರೆ, ಅಲ್ಲಿ ಡಾಕ್ಟರ್ ಇಲ್ಲದೇ ಇದ್ದರೆ ಪಕ್ಕದ ಆಸ್ಪತ್ರೆಯಲ್ಲಿರುವ ಡಾಕ್ಟರ್‌ಗೆ ನಿಮ್ಮ ಕಡೆಯಲ್ಲಿರುವ ಆಸ್ಪತ್ರೆಗೆ ಬಂದು ನೋಡಬೇಕೆಂದು ತಿಳಿಸುತ್ತೇನೆ. ಇನ್ನು ಎರಡನೆಯದಾಗಿ ಈಗೇನು 250 ಜನ ಡಾಕ್ಟರ್‌ಗಳನ್ನು ತುಂಬುತ್ತಿದ್ದೇವೆ ಆ ರೀತಿ ಹುದ್ದೆಗಳನ್ನು ಭರ್ತಿ ಮಾಡುವ ಸಂದರ್ಭದಲ್ಲಿ ತಾವೇನು ಈಗ ತಮ್ಮ ಕಳವಳವನ್ನು ವ್ಯಕ್ತ ಮಾಡಿದ್ದೀರಿ ಈ ಸದನದಲ್ಲಿ ಅದನ್ನು ಗಮದಲ್ಲಿಟ್ಟುಕೊಂಡು ಭರ್ತಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಹೊಸಪೇಟೆ ತಾಲ್ಲೂಕ ಜಂಬುನಾಥ ಗುಡ್ಡದ ಸುತ್ತಮುತ್ತ ಗಣಿಗಾರಿಕೆ ನಡೆಯುತ್ತಿರುವುದು

613 (5391) : ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬಳ್ಳಾರಿ ಜಿಲ್ಲೆ ಹೊಸಪೇಟೆ ತಾಲ್ಲೂಕಿ ಜಂಬುನಾಥ ಗುಡ್ಡದ ಸುತ್ತಮುತ್ತ ಗಣಿಗಾರಿಕೆ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದರೆ, ಈ ಗಣಿಗಾರಿಕೆಗಳವರು ನಡೆಸುತ್ತಿರುವ ಸ್ಫೋಟಕಗಳಿಂದ ಈ ಗುಡ್ಡದ ಮೇಲಿರುವ ಜಂಬುನಾಥಸ್ವಾಮಿ ದೇವಸ್ಥಾನ ಹಾಗೂ ಈ ಗುಡ್ಡದ ಸುತ್ತಮುತ್ತಲಿರುವ ಮನೆಗಳು ಬಿರುಕು ಬಿಟ್ಟು ಹಾನಿಗೊಳಗಾಗಿರುವುದು ಮತ್ತು ಕುಸಿಯುವ ಹಂತಕ್ಕೆ ತಲುಪಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಇ) ಬಂದಿದ್ದಲ್ಲಿ, ಈ ಪುರಾತನ ದೇವಾಲಯವನ್ನು ಉಳಿಸಿಕೊಳ್ಳಲು ಹಾಗೂ ಗುಡ್ಡದ ಸುತ್ತಮುತ್ತ ಹಾನಿಗೊಳಗಾದ ಮನೆಗಳವರಿಗೆ ಯಾವ ಪರಿಹಾರವನ್ನು ನೀಡಲಾಗಿದೆ;

ಈ) ಈ ದೇವಸ್ಥಾನದ ಸುತ್ತಮುತ್ತ ನಡೆಯುತ್ತಿರುವ ಗಣಿಗಾರಿಕೆಯನ್ನು ನಿಲ್ಲಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ; ಇಲ್ಲದಿದ್ದರೆ ಕಾರಣವೇನು?